
# ಒದ್ದೆಯಾಗದ ಕೊಡೆ

ಮಳೆಗಾಲದಲ್ಲೂ ಉಳಿದುಬಿಟ್ಟಿತ್ತು
ಒದ್ದೆಯಾಗದೆ ನಿರುದ್ಯೋಗಿ ಕೊಡೆ
ಹೇಳಲಾಗುವುದಿಲ್ಲ ಮಳೆ
ಈಗಲೇ ಬರಬಹುದು
ಹೆಣ್ಣು ಕಾಲಗಳನ್ನು ಬಲ್ಲವರು ಯಾರು
ಯುವತಿಯ ಮನಸು
ಔಷಧಿ ರಸೀದಿಯ ಮೇಲಿನ
ವೈದ್ಯರ ಬರಹದ ರೀತಿ
ಅರಿತವರಿಗೆ ಗೊತ್ತು ಅದರೊಳಗಿನ ಗುಟ್ಟು
ಏನುಂಟು ಏನಿಲ್ಲ
ಅವರ ಒಡಲೊಳಗೆ ತಿಳಿಯಲು ಹೋಗಿ ಸೋತಿದ್ದು
ಇದು ನೂರನೆ ಸರತಿ
ಸಾಲು ಸಾಗಲಿಲ್ಲ
ಕವಿತೆ ಮುಗಿಯಲಿಲ್ಲ
ಕಲ್ಪನೆಯಲ್ಲೂ ಕಾಣ ಸಿಗುವುದು
ಯಾರದೋ ಅಸ್ಪಷ್ಟ ರೂಪ
ಎಲ್ಲಾ ಮಲಗಿದರು ಉರಿಯುವ
ಒಂಟಿ ಬೀದಿ ದೀಪ
ಯಾವ ಪ್ರಶ್ನೆಗೂ ಉತ್ತರ ಸಿಗದೆ
ನಿದ್ರೆಗೆ ಸರಿದೆ

ಬೆಳಗೆದ್ದು ನೋಡಿದರೆ
ಆಶ್ಚರ್ಯ ಕಾದಿತ್ತು
ವಿಚ್ಛೇದನದ ನಂತರ ಕಪಾಟಿನ ಮೂಲೆಯಲ್ಲಿ
ಪತ್ತೆಯಾಗಿತ್ತು ಮದುವೆಯ ಆಮಂತ್ರಣ ಪತ್ರಿಕೆ
ಅದೇ ಮೂಲೆಯಲ್ಲಿ
ಮಡದಿ ಕೊಂಡು
ಬಳಸದೆ ಉಳಿದ
ಮತ್ತೊಂದೂ ಒದ್ದೆಯಾಗದ ಕೊಡೆ.



● **ಸಂದೀಪ್ ಈಶಾನ್ಯ**